ತ್ತಿದ್ದಾರೆ. ೩೨೭೧ ಪ್ರಕರಣಗಳಲ್ಲಿ ಕಾಯಿದೆಯಿಂದ ಮನ್ನಾ ಮಾಡಲಾಗಿದೆಯೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸ್ಪೆಸಿಫಿಕ್ ಕೇಸ್‌ನಲ್ಲಿ ಮಾತ್ರ ಮನ್ನಾ ಮಾಡಬೇಕೆಂದು ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಇದೆ. ಈ ವಿಚಾರದಲ್ಲಿ ವಿವರಣೆಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಬೆಂಗಳೂರಿನಲ್ಲಿ ೧೯೫೬ ಎಕರೆಯಂನ್ನು ಈ ರೀತಿ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ಇದನ್ನು ಯಾವ ರೀತಿಯಾಗಿ ವಿತರಣೆ ಮಾಡಬೇಕೆನ್ನುವುದಕ್ಕೆ ಜಿಲ್ಲಾಮಟ್ಟದಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಇಂತಹ ಜಮೀನನ್ನು ಸರ್ಕಾರ ಹಾಗೂ ಇತರ ಇಲಾಖೆಗಳು ಹೇಗೆ ಉಪಯೋಗಿಸಬೇಕೆಂದು ಶಿಫಾರಸ್ಸು ಮಾಡಿ ಕಳಿಸುತ್ತದೆ. ಅದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ.

ಶ್ರೀ ಕೆ. ಜೆ. ಜಾರ್ಜ್.— ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಎಕ್ಸ್‌ಟ್ರಾ ಲ್ಯಾಂಡ್ಸ್ ಬೇಕಾದಷ್ಟು ಇರುವಾಗ ಬರಿ ೧೯೫೬ ಎಕರೆಯನ್ನು ವಶಪಡಿಸಿಕೊಂಡಿದ್ದೀರಿ, ಅಂದರೆ ಅರ್ಬನ್ ಲ್ಯಾಂಡ್ ಸೀಲಿಂಗ್ ಇಂಪ್ಲಿಮೆಂಟ್ ಆಗುತ್ತಿಲ್ಲವೇ ? ಗ್ರಾಮಾಂತರ ಪ್ರದೇಶಗಳಲ್ಲಿ ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಅನ್ನು ಸ್ಟ್ರಿಕ್ ಆಗಿ ಇಂಪ್ಲಿಮೆಂಟ್ ಮಾಡುತ್ತಾರೆ. ಅದೇ ರೀತಿ ಇಲ್ಲೂ ಮಾಡ ಬೇಕು. ಇಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ನನಗನ್ನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಉಹಾಪೋಹದ ಆಪಾದನೆ ಮಾಡುವುದರಿಂದ ಏನೂ ಪ್ರಯೋಜನ ವಿಲ್ಲ. ಎಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಸ್ಪೆಸಿಫಿಕ್‌ಆಗಿ ನನಗೆ ಹೇಳಿದರೆ ಅದನ್ನು ಪರಿಶೀಲಿಸುತ್ತೇನೆ. ಬೆಂಗಳೂರಿನಲ್ಲಿ ೧೯೫೬ ಇದೆಯೆಂದು ಹೇಳಿದ್ದೇನೆ.

## ದಾವಣಗೆರೆಯಲ್ಲಿ ಬಸ್ ನಿಲ್ದಾಣ ಕಟ್ಟುವ ಬಗ್ಗೆ.

೧೨೮೬. ಶ್ರೀ ಪಂಪಾಪತಿ (ದಾವಣಗೆರೆ) — ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿ ಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದಾವಣಗೆರೆ ಬಸ್ ನಿಲ್ದಾಣ ಕಟ್ಟಲು ಪ್ರಾರಂಭಿಸಿ ಎಷ್ಟು ದಿನಗಳಿಗೆ ಮುಗಿಸಬೇಕಾಗಿತ್ತು ?

ಆ) ವಿಳಂಬವಾಗಲು ಕಾರಣವೇನು, ಹಾಗೂ ಯಾವಾಗ ಮುಗಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).—

ಅ) ನವೆಂಬರ್ ೧೯೮೩ರಲ್ಲಿ ಪ್ರಾರಂಭಿಸಿ ಡಿಸೆಂಬರ್ ೧೯೮೫ರ ವೇಳೆಗೆ ಮುಗಿಸಬೇಕಾಗಿತ್ತು.

ಆ) ಭೂ ಸ್ವಾಧೀನದಲ್ಲಿ ಆಗುತ್ತಿರುವ ವಿಳಂಬ, ಉಕ್ಕು ಮತ್ತು ಸಿಮೆಂಟ್ ಸರಿಯಾದ ವೇಳೆಗೆ ಸರಬರಾಜಾಗದೆ ಇರುವುದರಿಂದ ನಿರ್ಮಾಣ ಕಾರ್ಯವು ನಿಧಾನವಾಗಿದೆ. ವಿವಾದದ ಜಮೀನಿನಲ್ಲಿರುವ ಕಟ್ಟಡದ ಭಾಗವನ್ನು ಬಿಟ್ಟು ಡಿಸೆಂಬರ್ ೧೯೮೬ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವು ಪೂರ್ಣ ಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೇ, ಈಗ ಉಕ್ಕು ಮತ್ತು ಸಿಮೆಂಟ್ ಸರಿಯಾದ ವೇಳೆಗೆ ಸಿಗದೇ ಇರುವುದರಿಂದ ೧೯೮೫ಕ್ಕೆ ಮುಗಿಯಬೇಕಾದ್ದನ್ನು ೮೬ಕ್ಕೆ ಮುಗಿಸುತ್ತೇವೆಂದು ಹೇಳುತ್ತಾರೆ. ದಾವಣಗೆರೆಗೆ ಬಸ್ ನಿಲ್ದಾಣ ತುಂಬಾ ಅಗತ್ಯ, ಅಲ್ಲಿ ಜನಸಂಖ್ಯೆ ಜಾಸ್ತಿಯಿರುವುದರಿಂದ ಬಹಳ ತೊಂದರೆ ಯಾಗಿದೆ. ೧೯೮೬ಕ್ಕಾದರೂ ಮುಗಿಸಲು ಅದಕ್ಕೆ ಬೇಕಾದಂತಹ ಉಕ್ಕು, ಸಿಮೆಂಟ್ ಅನ್ನು ಒದಗಿಸಿ ಅದನ್ನು ಮುಗಿಸತಕ್ಕಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ೮೬ರ ಕೊನೆಯ ಹೊತ್ತಿಗೆ ಮುಗಿಸಲು ಪ್ರಯತ್ನ ಮಾಡುತ್ತೇವೆ

## ಹುಬ್ಬಳ್ಳಿ–ಧಾರವಾಡ ನಗರಪಾಲಿಕೆ ಮನೆಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಖಾಲಿ ಮಾಡಿಸುವ ಬಗ್ಗೆ.

೭೯೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯಿಂದ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು? ಹಾಗೂ ಎಂದಿನಿಂದ ಕಟ್ಟಲಾಗಿದೆ.

ಅ) ಹುಬ್ಬಳ್ಳಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಹಾಗೂ ಇತರರಿಗೆ ಬಾಡಿಗೆ ಮೇರೆಗೆ ಹಂಚಲಾಗಿರುವ ಮನೆಗಳೆಷ್ಟು (ಕಳೆದ ಐದು ವರ್ಷಗಳ ಮಾಹಿತಿಯನ್ನು ಕೊಡುವುದು).

ಇ) ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರಿಗೆ ಸ್ವಂತ ಮನೆ ಇದ್ದು ಅವುಗಳನ್ನು ಬೇರೆಯವರಿಗೆ ಹೆಚ್ಚಿಗೆ ಬಾಡಿಗೆಗೆ ಕೊಟ್ಟು ಅವರುಗಳು ನಗರಪಾಲಿಕೆಯ ಮನೆಗಳಲ್ಲಿ ಬಹು ಕಾಲದಿಂದಲೂ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇಂತಹವರ ಸಂಖ್ಯೆ ಎಷ್ಟು ಹಾಗೂ ಇವರು ಯಾವ ವರ್ಷದಿಂದ ವಾಸಿಸುತ್ತಿರುವರು ಹಾಗೂ ಇವರುಗಳ ವಿರುದ್ಧ ಕೈಗೊಂಡ ಕ್ರಮವೇನು ?

ಉ) ಮೇಲ್ಕಂಡ ನೌಕರರು ಸ್ವಂತ ಮನೆ ಬೇರೆಯವರಿಗೆ ಬಾಡಿಗೆಗೆ ನೀಡಿ ನಗರಪಾಲಿಕೆಯ ಮನೆ ಖಾಲಿ ಮಾಡಿಸದೇ ಇರುವುದಕ್ಕೆ ಕಾರಣವೇನು ?

ಊ) ಈ ಹಿಂದೆ ಖಾಲಿ ಮಾಡಿಸಲು ನೋಟೀಸ್ ಜಾರಿ ಮಾಡಿರುವುದು ನಿಜವೇ ? ಹಾಗಿದ್ದಲ್ಲಿ ಎಷ್ಟು ಕಾಲಾವಧಿಯಲ್ಲಿ ಖಾಲಿ ಮಾಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೯೬ ವಾಸದ ಮನೆಗಳನ್ನು ೧೯೫೯ ರಿಂದ ೧೯೬೪ರ ಅವಧಿಯೊಳಗೆ ಕಟ್ಟಲಾಗಿದೆ.

ಆ) ಸದರಿ ಮನೆಗಳನ್ನು ಕೆಲಕಾಲದ ಹಿಂದೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಹಾಗೂ ಇತರರಿಗೆ ಹುಬ್ಬಳ್ಳಿಯಲ್ಲಿ ಈ ಕೆಳಗಿನಂತೆ ಹಂಚಲಾಗಿದೆ.

| | | |
|---|---|---|
| ೧) ಕೇಂದ್ರ ಸರ್ಕಾರದ ನೌಕರರಿಗೆ | — | ೨೯ |
| ೨) ರಾಜ್ಯ ಸರ್ಕಾರದ ನೌಕರರಿಗೆ | — | ೫ |
| ೩) ಇತರರಿಗೆ | — | ೬೨ |
| | ಒಟ್ಟು | ೯೬ |

ಕಳೆದ ಐದು ವರ್ಷಗಳಲ್ಲಿ ಹೊಸದಾಗಿ ಯಾರಿಗೂ ಕೊಡಮಾಡಿಲ್ಲ.

ಇ). ಹೌದು.

ಈ) ಒಟ್ಟು ೬ ಜನ, ಕೇಂದ್ರ ಸರ್ಕಾರಿ ನೌಕರರು ಇವರು ಸುಮಾರು ೧೨ ವರ್ಷಕ್ಕೂ ಹಿಂದಿನಿಂದ ವಾಸಿಸುತ್ತಿರುವರು ಇವರಿಗೆ ಮನೆಗಳನ್ನು ಬಿಟ್ಟುಕೊಡುವ ಬಗ್ಗೆ ನೋಟೀಸುಗಳನ್ನು ಕೊಡಲಾಗಿದೆ.

ಉ) ಸ್ವಂತ ಮನೆಗಳಿಲ್ಲದಂತ ಬಾಡಿಗೆದಾರರ ಮಾಹಿತಿ ದಿನಾಂಕ ೬-೨-೧೯೮೬ ರಂದು ತಿಳಿದು ಬಂದ ನಂತರ ಪರಿಶೀಲಿಸಿ ನೋಟೀಸುಗಳನ್ನು ದಿನಾಂಕ ೨೮-೫-೧೯೮೬ ಹಾಗೂ ೧೦-೬-೧೯೮೬ ರಂದು ಕೊಡಲಾಗಿದೆ. ಆದರೆ ಅವರಿಂದ ಉತ್ತರ ಬಂದಿಲ್ಲ.

ಊ) ದಿನಾಂಕ ೨೮-೫-೧೯೮೬ ಹಾಗೂ ೧೦-೬-೮೬ ರಂದು ನೋಟೀಸು ಕೊಡಲಾಗಿದೆ. ಕೆ. ಎಂ. ಸಿ. ಕಾಯ್ದೆ ೧೯೭೬ ಕಲಂ ೪೫೬ ಎ ನೇದ್ದರ ಪ್ರಕಾರ ಸದರಿಯವರನ್ನು ಅನಧಿಕೃತವಾಗಿ ವಾಸಿಸುತ್ತಿರುವವರೆಂದು ಪರಿಗಣಿಸಿ ಕಾಯ್ದೆ ಪ್ರಕಾರ ಖಟ್ಲೆಗೆ ಗುರಿ ಮಾಡುವುದಲ್ಲದೇ ಮನೆ ಬಿಡಿಸಿಕೊಳ್ಳಲು ಕ್ರಮ ಮಹಾನಗರ ಪಾಲಿಕೆಯು ಕೈಕೊಳ್ಳುವುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಸರ್ಕಾರನಲ್ಲಿ ಬಡವರಿಗೊಂದಂ, ಶ್ರೀಮಂತರಿಗೊಂದು ಬುಕ್ಸ್ ಇದೆಯೇ ? ಆರು ಮನೆ ಎಂದು ಹೇಳಿದ್ದಾರೆ. ೭ ಮನೆ ಇದೆ. ಆ ಆರು ಮಂದಿಯ ಹೆಸರನ್ನು ಹೇಳುತ್ತೀರಾ ? ಆ ಆರು ಮಂದಿ ಮಾತ್ರ ಮನೆ ಕಟ್ಟಿ, ಕಟ್ಟಿದ ನಂತರ ಬೇರೆಯವರಿಗೆ ಬಾಡಿಗೆಗೆ ಕೊಡ್ಡಿದ್ದಾರೆಯೇ ಅದಕ್ಕಿಂತ ಜಾಸ್ತಿ ಮನೆ ಇದೆ. ನಾನು ತೋರಿಸಿಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಆರು ಮಂದಿಯ ಹೆಸರುಗಳ ಹೀಗಿವೆ. ಪಿ. ವೈ. ಸಂಗನಾಳ, ಶ್ರೀ ಎನ್. ಎಲ್. ಗಡಗಿ, ಶ್ರೀ ಎನ್, ಎಸ್. ವೆಂಕೋಬರಾವ್, ಶ್ರೀ ಬಿ. ಟಿ. ವಡವಿ, ಶ್ರೀ ಡಿ. ಡಿ. ಜೋಶಿ, ಶ್ರೀ ಬಿ. ಕೆ. ಗಿಡ್ಡಣ್ಣನವರೆ ಎಂದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಶ್ರೀ ವಿ. ಎಸ್. ಜೋಶಿ ಎಂದು ನನ್ನ ಹತ್ತಿರ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ನನ್ನ ಹತ್ತಿರ ದಾಖಲೆ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ —ಬೆಳಗಾಗುವುದರೊಳಗೆ ನೂರಾರು ಮನೆಗಳನ್ನು ಕಿತ್ತು ಹಾಕುತ್ತಾರೆ. ನಿಮ್ಮ ಸರ್ಕಾರದಲ್ಲಿ ಗಂಡಸುತನ ಇದೆಯೇ ? ಎಷ್ಟು ದಿನದಲ್ಲಿ ಕ್ರಮ ತೆಗೆದು ಕೊಳ್ಳುತ್ತೀರಿ ? ನನಗೆ ಉತ್ತರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಗಂಡಸುತನದ ಪ್ರಶ್ನೆ ಇಲ್ಲಿ ಬರುವುದಿಲ್ಲ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಕಡೆ ಕೂತವರನ್ನು ಆ ಕಡೆ ಕೂತವರೆಂದೇ ತಿಳಿದು ಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನಿನ ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ, ಅದನ್ನು ಮಹಾನಗರ ಪಾಲಿಕೆಯವರು ತೆಗೆದುಕೊಳ್ಳುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಎಷ್ಟು ದಿನದಲ್ಲಿ ತೆಗೆದುಕೊಳ್ಳುತ್ತಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಕ್ರಮ ಕೈಗೊಳ್ಳಬೇಕಾದವರು ಹುಬ್ಬಳ್ಳಿ, ಧಾರವಾಡ ಮಹಾ ನಗರ ಸಭೆಯವರು. ಕಾನೂನು ಪ್ರಕಾರ ನೋಟೀಸ್ ಕೊಟ್ಟಿದ್ದಾರೆ, ಆ ನೋಟೀಸ್ ಪ್ರಕಾರ ಅವರು ಮನೆಯನ್ನು ತೆರವು ಮಾಡದೇ ಹೋದರ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ ಕ್ರಮ ತೆಗೆದುಕೊಳ್ಳುವವನು ನಾನಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಆ ಮನೆಯನ್ನು ಅವರವರಿಗೆ ನೀಡಬೇಕಾ ಒಬ್ಬೊಬ್ಬರು ಮೂರು ಮನೆಗಳನ್ನು ಬಾಡಿಗೆಗೆ ಕೊಡುತ್ತಾರೆ. ಶ್ರೀಮಂತರಿಗೊಂದೂ ಕಾನೂನು ಬಡವರಿಗೊಂದು ಕಾನೂನು ಇದೆಯೇ ? ಬಡವರ ಮನೆಗಳನ್ನು ರಾತ್ರೋರಾತ್ರಿ ಉರುಳಿಸುತ್ತೀರಿ ಅದೇ ಶ್ರೀಮಂತರು ನಾಲ್ಕು ಮನೆ ಇದ್ದುಕೊಂಡು ತಿಂಗಳಿಗೆ ಎಂಟಡಿಂ ಸಾವಿರ ಒಂದೂವರೆ ಸಾವಿರಕ್ಕೆ ಬಾಡಿಗೆ ಪಡೆಯುತ್ತಿದಾರೆ ಇಷ್ಟು ದಿವಸದಲ್ಲಿ ಖಾಲಿ ಮಾಡಿಸುತ್ತೇವೆಂದು ಹೇಳಿದರೆ ಸಾಕು.

ಶ್ರೀ ಲಕ್ಷ್ಮೀಸಾಗರ್.—ಕಾರ್ಪೊರೇಷನ್‌ಗೆ ಹೇಗತಕ್ಕಂತಹ ಅವಕಾಶ ಇದೆ. ಅಲ್ಲೇ ಹೋಗಿ ಈ ವಾದವನ್ನು ಏಕೆ ಮಾಡಿಲ್ಲ ? ನಮ್ಮ ಹತ್ತಿರ ಏಕೆ ಕೇಳುತ್ತೀರಿ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್ –ಮುನಿಸಿಪಲ್ ಆಕ್ಟ್ ಪ್ರಕಾರ ಕೆಲವು ಅಧಿಕಾರ ಸರ್ಕಾರಕ್ಕೆ ಇವೆ ಕೆಲವು ಅಧಿಕಾರ ಮುನಿಸಿಪಾಲಿಟಿ ಕಾರ್ಪೊರೇಷನ್‌ರವರಿಗೆ ಇದೆ. ಅವರು ಮಾಡದೇ ಹೋದರೆ ಏಕೆ ಮಾಡಿಲ್ಲ ವೆಂದು ಸನ್ಮಾನ್ಯ ಸದಸ್ಯರು ಆ ಸಭೆಗೆ ಹೋಗಬಹುದಕ್ಕೆ ಅಧಿಕಾರ ಇದೆ. ಅದನ್ನು ಉಪಯೋಗಿಸಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಅಲ್ಲಿಗೆ ನಾನು ನೋಡುವುದಕ್ಕೆ ಹೋಗಲು ಟಿ. ಎ. ಡಿ. ಎ. ಕೊಡಿ ಹೋಗಿ ನೋಡಿಕೊಂಡು ಬರುತ್ತೇನೆ. ಒಂದು ವರ್ಷವಾಗಿದೆ ಇನ್ನೂ ಏನೂ ಕ್ರಮ ಕೈಗೊಂಡಿಲ್ಲ. ಇನ್ನೂ ಎಷ್ಟು ಸಮಯ ಬೇಕು. ಆದೇ ಬಡವನ ಮನೆಯಾದರೆ ಬುಲ್ ಡೋಜರ್ ತೆಗೆದುಕೊಂಡು ಹೋಗಿ ಎರಡು ನಿಮಿಷದಲ್ಲಿ ಹೊಡೆಸುತ್ತೀರಿ.